**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 5 ಪಿಡಬ್ಲ್ಯು- 11

ದಿನಾಂಕಃ 17.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ದುಂಡಪ್ಪಾ ಈಶ್ವರ ಕುಂಭಾರ

ವಯಸ್ಸು : 65 ವರ್ಷ

ಉದ್ಯೋಗ : ಶೇತ್ಕಿ

ವಾಸ ಸ್ಥಳ : ಕಮತೇನಟ್ಟಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನನಗೆ ಚಾಸಾ 6 ಗೊತ್ತು. ಚಾಸಾ 11 ಗೊತ್ತಿಲ್ಲ. ಈ ಕೇಸನಲ್ಲಿ ಪೊಲಿಸರು ನನ್ನ ಸಮಕ್ಷಮ ಯಾವದೇ ಪಂಚನಾಮೆ ಮಾಡಿಲ್ಲ ಎನು ಜಪ್ತಿ ಮಾಡಿಲ್ಲ. ಆದರೆ 8-9 ವರ್ಷದ ಹಿಂದೆ ಪೋಲಿಸರು ಠಾಣೆಗೆ ಕರೆಸಿ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿ ಬಟ್ಟೆ ಜಪ್ತಿ ಪಂಚನಾಮೆ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಇದನ್ನು ನಿಪಿ 9 ಎಂದು, ಸಾಕ್ಷಿ ಸಹಿ ನಿಪಿ 9(ಎ) ಎಂದು ಗುರುತಿಸಲಾಯಿತು. ನಿಪಿ 9 ರಲ್ಲಿ ಬರೆದ ವಿಷಯ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೇಳಿಕೊಂಡಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ

09.01.2014 ರಂದು ಪೋಲಿಸರು ನನ್ನ ಮತ್ತು ಚಾಸಾ 6 ರ ಸಮಕ್ಷಮ ಬೆಳಗಾವಿ ಲೆಕ ವಿವ್ ಆಸ್ಪತ್ರೆಯಲ್ಲಿ ಚಾಸಾ 11 ಹಾಜರು ಪಡಿಸಿದ ಈಗ ತೋರಿಸಿದ ಮು.ಮಾ17 ರಿಂದ 21 ನ್ನು ಜಪ್ತಿ ಮಾಡಿ ಸಂಜೆ 5 ರಿಂದ 6 ಗಂಟೆಯವರೆಗೆ ಪಂಚನಾಮೆ ಮಾಡಿ ಅಲ್ಲೇ ನನ್ನ ಸಹಿ ಪಡೆದರು ಅನ್ನುವುದು ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ ಎನ ಪಿ ವಕೀಲರು ಇಲ್ಲ ಎಂದು ಹೇಳುತ್ತಾರೆ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.